<u>ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ..... ಚಿತ್ತಾಪೂರ</u>

C.C No. 295/2017
CW-10 PW-9

ಹೆಸರು : ಜಗನ್ನಾಥ್

ತಂದೆಯ ಹೆಸರು: ಸ್ವಾಬಣ್ಣಾ ತಳವಾರ್

ವಯಸ್ಸು : 42 ವರ್ಷ

ಉದ್ಯೋಗ : ಎಸ್.ಡಿ.ಎ.

ವಾಸ ಸ್ಥಳ : ಭರತನೂರು

---

<u>ಪ್ರಮಾಣವಚನ ಬೋಧಿಸಲಾಯಿತು. ದಿಃ 29-01-2026</u>

<u>ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರಿಂದ</u>

ನಾನು 2015 ರಿಂದ 2017 ರವರೆಗೆ ಕಂದಗೋಳು ಗ್ರಾಮ ಪಂಚಾಯತ್ ನಲ್ಲಿ ಎಸ್.ಡಿ.ಎ. ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ನನಗೆ ಚಾಸಾ-1ರವರ ಪರಿಚಯ ಇದೆ. ನನಗೆ ಚಾಸಾ-4 ರಿಂದ 9 ಮತ್ತು 11 ರವರ ಪರಿಚಯ ಇದೆ. ನ್ಯಾಯಾಲಯದ ಮುಂದಿರುವ ಆರೋಪಿತರ ಪರಿಚಯ ಇದೆ.

ದಿಃ 29.04.2017ರಂದು ಬಸವ ಜಯಂತಿ ಆಚರಣೆಯನ್ನು ನಮ್ಮ ಕಛೇರಿಯಲ್ಲಿ ಮಾಡಿರುತ್ತೇವೆ. ನಂತರ ನಮ್ಮ ಗ್ರಾಮ ಪಂಚಾಯತಿಯ ಕಮಿಟಿ ಸದಸ್ಯರು ಊರಿನಲ್ಲಿ ಬಸವ ಜಯಂತಿ ಆಚರಣೆ ಮಾಡಲು ನಮಗೆ ಕರೆದರು. ಆಗ ಚಾಸಾ-1ರವರು ಮೇಲಧಿಕಾರಗಳೊಂದಿಗೆ ಮೀಟಿಂಗ್ ಇದೆ ಬರಲು ಆಗುವುದಿಲ್ಲ ಎಂದು ಹೇಳಿದಾಗ, ಕಮಿಟಿಯವರು ಆಚರಣೆ ಮಾಡಿ ಹೋಗಬೇಕು ಮತ್ತು ಆಚರಣೆ ಮಾಡಲು ಸರಕಾರದ ವತಿಯಿಂದ ಹಣ ಕೊಡಬೇಕೆಂದು ಕೇಳಿದಾಗ ಚಾಸಾ-1ರವರು ಕೇವಲ ಎಸ್.ಸಿ. ಎಸ್.ಟಿ ಜನಾಂಗದ ಜನರಿಗೆ ಮಾತ್ರ ಸರಕಾರದ ವತಿಯಿಂದ ಆಚರಣೆ ಮಾಡಲು ಹಣ ನೀಡಲಾಗುತ್ತದೆ, ಬಸವ ಜಯಂತಿಗೆ ನೀಡಲಾಗುವುದಿಲ್ಲ ಎಂದು ಹೇಳಿದಾಗ ಚಾಸಾ- 1 ಮತ್ತು ಆರೋಪಿತರ ನಡುವೆ ಮಾತಿನ ಚಕಮಕಿ ಆಗಿರುತ್ತದೆ. ನಂತರ ಚಾಸಾ- 1 ಮತ್ತು ನಾವೆಲ್ಲರೂ ಸೇರಿ ಬಸವ ಜಯಂತಿ ಆಚರಣೆ ಮಾಡಲು ಊರಿನಲ್ಲಿ ಹೋಗಿ ಬಸವ ಜಯಂತಿ ಆಚರಣೆ ಮಾಡಿ

ಬಂದಿರುತ್ತೇವೆ. ಚಾಸಾ-1ರವರು ಬಸವ ಜಯಂತಿ ಆಚರಣೆ ಮಾಡಲು ಸರಕಾರದ ವತಿಯಿಂದ ಹಣವನ್ನು ಕಮಿಟಿಯವರಿಗೆ ನೀಡಿರುತ್ತಾರೆ.

(ಮಾನ್ಯ ಸ ಸ ಅ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೋರಿದ್ದು ದಾಖಲೆಗಳನ್ನು ಪರಿಶೀಲಿಸಿ ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ನೀಡಲಾಯಿತು.)

<u>ಪಾಟೀ ಸವಾಲುಃ ಸ.ಸ.ಅಭಿಯೋಜಕರವರಿಂದ</u>

ದಿಃ 29.04.2017ರಂದು ಬೆಳಿಗ್ಗೆ 09.00 ಗಂಟೆಗೆ ನಾನು, ಚಾಸಾ-1, 4 ರಿಂದ 9 ಮತ್ತು 11 ರವರು ಸೇರಿ ಕಂದುಗುಳು ಗ್ರಾಮದಲ್ಲಿ ಬಸವ ಜಯಂತಿ ಆಚರಿಸಿದ್ದೇವೆ ಎಂದರೆ ಸರಿ. ಸದರಿ ಆಚರಣೆ ಆದ ನಂತರ ಅಲ್ಲಿ ಸೇರಿದ ಜನರಿಗೆ ಚಹಾ ಮತ್ತು ಬಿಸ್ಕೆಟ್ ವ್ಯವಸ್ಥೆ ಮಾಡಲಾಗಿತ್ತು ಎಂದರೆ ಸರಿ. ಆಗ ಆರೋಪಿತರು ಬಸವ ಜಯಂತಿಗೆ ಸರಕಾರದವರು ಹಣ ನೀಡುತ್ತಾರೆ ಆದ ಕಾರಣ ಸದರಿ ಹಣವನ್ನು ಬಿಡುಗಡೆ ಮಾಡಬೇಕೆಂದು ಕೇಳಿದರು ಎಂದರೆ ಸರಿ. ಆಗ ಚಾಸಾ-1ರವರು ಬಸವ ಜಯಂತಿ ಆಚರಿಸಲು ಯಾವುದೇ ಬಿಡುಗಡೆ ಆಗಿಲ್ಲ ಕೇವಲ ಎಸ್.ಸಿ ಎಸ್.ಟಿ ಜನಾಂಗದವರ ಆಚರಣೆಗೆ ಮಾತ್ರ ಹಣ ಬಿಡುಗಡೆ ಮಾಡಬಹುದು ಎಂದು ಹೇಳಿದರು ಎಂದರೆ ಸರಿ. ಆಗ ಆರೋಪಿತರೆಲ್ಲರೂ ಸೇರಿ ಚಾಸಾ-1ರವರಿಗೆ ಕುರ್ಚಿಯಿಂದ ದಬ್ಬಿ ನೀನು ಅಯೋಗ್ಯ ಇದ್ದೀಯಾ ನಿನ್ನ ಅಂಗಿ ಪ್ಯಾಂಟ್ ಬಿಚ್ಚಿಸಿ ಮೆಟ್ಟು ಕಟ್ಟಿ ಮೆರವಣಿಗೆ ಮಾಡಬೇಕೆಂದು ಅವಾಚ್ಯವಾಗಿ ಬೈದರು ಎಂದರೆ ಸಾಕ್ಷಿ ಅವರು ಕೇವಲ ಬಾಯಿ ಮಾತಿನಲ್ಲಿ ಬೈದಿದ್ದು ಕುರ್ಚಿಯಿಂದ ದಬ್ಬಿಲ್ಲ ಎಂದು ನುಡಿಯುತ್ತಾರೆ. ನೀವು ಆಗ ಜಗಳ ಬಿಡಿಸಿದ್ದೀರಿ ಎಂದರೆ ಸರಿ. 1ನೇ ಆರೋಪಿತ ಚಾಸಾ-1ರವರ ಕೈಯಲ್ಲಿದ್ದ ಮೊಬೈಲನ್ನು ಕಸಿದು ಪಿ.ಡಿ.ಓ. ಕುರ್ಚಿಯ ಮೇಲೆ ಕೂಡಬೇಡ ಎಂದು ಹೇಳಿ ನೆಲದ ಮೇಲೆ ಕೂಡು ಎಂದು ಹೇಳಿದ ಎಂದರೆ ಸರಿಯಲ್ಲ. ಘಟನೆಯ ಕುರಿತು ಪೋಲೀಸರು ಬಂದು ಎಲ್ಲರಿಗೂ ತಿಳಿ ಹೇಳಿ ಚಾಸಾ-1ರವರು ದೂರು ನೀಡಿದ ಬಗ್ಗೆ ನಿಮಗೆ ತಿಳಿದು ಬಂತು ಎಂದರೆ ಸರಿ. ನೀವು ಆ ಕಾರಣ ದಿಃ 02.05.2017ರಂದು ನಿಮ್ಮ ಹೇಳಿಕೆಯನ್ನು ಪೋಲೀಸರಿಗೆ ನೀಡಿದ್ದೀರಿ ಎಂದರೆ ಸರಿ. ಸಾಕ್ಷಿಯು ಮುಂದುವರಿದು ಕೇವಲ ಬಾಯಿ ಮಾತಿನ ಜಗಳ ಆಗಿತ್ತು ಎಂದು ನುಡಿಯುತ್ತಾರೆ. ನೀವು ಹೇಳಿಕೆ ನೀಡಿದ್ದರೂ ಸಹ ಕೇವಲ ಬಾಯಿ ಮಾತಿನ ಜಗಳ ಆಗಿತ್ತು ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ ಆರೋಪಿತರ ಪರ ಶ್ರೀ.ಜಿ.ಎಸ್. ವಕೀಲರಿಂದ -</u>

ಬಸವ ಜಯಂತಿಯ ಆಚರಣೆಯನ್ನು ಕೇವಲ ಗ್ರಾಮ ಪಂಚಾಯತ್ ಸದಸ್ಯರು ಮತ್ತು ಅಧಿಕಾರಿಗಳು ಸೇರಿ ಮಾಡುತ್ತಾರೆ ಎಂದರೆ ಸಾಕ್ಷಿ ಸಾರ್ವಜನಿಕರು ಸಹ ಬರಬಹುದೆಂದು ನುಡಿಯುತ್ತಾರೆ. ಯಾವುದೇ ಜಯಂತಿ ಆಚರಣೆ ಮಾಡಲು ಹಣದ ಬಗ್ಗೆ ವಿಚಾರ ಬಂದಾಗ ಕೇವಲ ಗ್ರಾಮ ಪಂಚಾಯತ್ ಸದಸ್ಯರು ಮತ್ತು ಅಧಿಕಾರಿಗಳು ಸೇರಿ ಮೀಟಿಂಗ್ ಮಾಡುತ್ತೀರಿ ಎಂದರೆ ಸರಿ. 2 ಮತ್ತು 3ನೇ ಆರೋಪಿತರು ಗ್ರಾಮ ಪಂಚಾಯತಿ ಸದಸ್ಯರಲ್ಲ ಎಂದರೆ ಸರಿ. ನೀವು ಮೀಟಿಂಗ್ ನಲ್ಲಿ ಸದಸ್ಯ ಇಲ್ಲದಿದ್ದರೆ ಅವರಿಗೆ ಒಳಗೆ ಬಿಡುವುದಿಲ್ಲ ಎಂದರೆ ಸರಿ. 1ನೇ ಆರೋಪಿತ ನಿಮ್ಮ ಗ್ರಾಮ ಪಂಚಾಯತಿಯ ಸದಸ್ಯನಾಗಿದ್ದ ಎಂದರೆ ಸರಿ. ಯಾವುದೇ ಜಯಂತಿ ಅಥವಾ ಕಾರ್ಯಕ್ರಮ ಆಚರಣೆ ಮಾಡಬೇಕಾದರೆ ಗ್ರಾಮ ಪಂಚಾಯತಿ ಸದಸ್ಯರೇ ಅದರ ಬಗ್ಗೆ ಅನುಮೋದನೆ ಮಾಡಬೇಕೆಂದರೆ ಸರಿ. ಗ್ರಾಮ ಪಂಚಾಯತಿ ಸದಸ್ಯರೇ ಸದರಿ ಆಚರಣೆಗೆ ಎಷ್ಟು ಹಣ ಬೇಕೆಂದು ಹೇಳುತ್ತಾರೆ ಎಂದರೆ ಸರಿ. ಚಾಸಾ-1ರವರು ಸರಿಯಾಗಿ ಲೆಕ್ಕಪತ್ರ ಇಡುತ್ತಿಲ್ಲ ಎಂದು 1ನೇ ಆರೋಪಿತ ಅವರ ಮೇಲೆ ಮೇಲಿಂದ ಮೇಲೆ ಆರೋಪ ಮಾಡುತ್ತಿದ್ದ ಎಂದರೆ ಸರಿ. ಸದರಿ ದುರುದ್ದೇಶ ಇಟ್ಟುಕೊಂಡು ಚಾಸಾ-1ರವರು ಆರೋಪಿತರ ವಿರುದ್ಧ ಸುಳ್ಳು ದೂರು ನೀಡಿದ್ದಾರೆ ಎಂದರೆ ಸರಿಯಲ್ಲ. ನೀವು ಪೋಲೀಸರ ಸಮಕ್ಷಮ ನೀಡಿರುವ ಹೇಳಿಕೆಯಲ್ಲಿ ಏನು ಬರೆಯಲಾಗಿದೆ ಎಂದು ನಿಮಗೆ ಮಾಹಿತಿ ಇಲ್ಲ ಎಂದರೆ ಸರಿ. ನನಗೆ ಈ ಪ್ರಕರಣದಲ್ಲಿ ಸಾಕ್ಷ್ಯ ನುಡಿಯಲು ನಿನ್ನೆ ಪೋಲೀಸರು ಹೇಳಿದ ನಂತರ ಗೊತ್ತಾಗಿದ್ದು ಆದ ಕಾರಣ ನಾನು ಇಂದು ನ್ಯಾಯಾಲಯಕ್ಕೆ ಬಂದಿರುತ್ತೇನೆ ಎಂದರೆ ಸರಿ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು )

ಓ. ಹೇ ಕೇ.ಸರಿ ಇದೆ.

ಸಿವಿಲ್ & J.M.F.C ನ್ಯಾಯಾಧೀಶರು,

ಚಿತ್ತಾಪೂರ.